12. ಪ್ರಕಟಣೆ

ವಿಷಯ :– ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ತಿದ್ದುಪಡಿ ವಿಧೇಯಕ ವಿಧಾನ ಪರಿಷತ್‌ನಿಂದ ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕೃತವಾಗಿರುವ ಬಗ್ಗೆ :

ಉಪಾಧ್ಯಕ್ಷರು :– "ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಇದೀಗ ಬಂದ ಸಂದೇಶದಲ್ಲಿ ನಿಯಮ 118 ರ ಮೇರೆಗೆ 2007 ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಮ್ಮೇಳನದಲ್ಲಿ ಪಾರದರ್ಶಕತೆ ತಿದ್ದುಪಡಿ ವಿಧೇಯಕ್ಕೆ ವಿಧಾನ ಪರಿಷತ್ತು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿದೆ ಎಂದು ತಿಳಿಸಿರುತ್ತಾರೆ."

13 ಶಾಸನ ರಚನೆ

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2007 (ಮುಂದುವರೆದ ಚರ್ಚೆ)

ಶ್ರೀ ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) :– ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿಯನ್ನು ತಂದು, ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಲ್ಲಿ ಸರ್ಕಾರ ಒದಗಿಸಿಕೊಟ್ಟಂಥ ಹಣ ಮತ್ತು ಅದರ ಯೋಜನೆಗಳ ಅನುಷ್ಠಾನವನ್ನು ಈ ಸಂಸ್ಥೆಗಳು ಮಾಡದೇ ಹೋದಂಥ ಸಂದರ್ಭದಲ್ಲಿ ಶಾಸಕರು ಅಥವಾ ಅವರ ಮುಖಾಂತರ ಆ ಒಂದು ಫಲ ಸಲ್ಲಿಸುವಂಥ ರೀತಿಯಲ್ಲಿ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು ಈ ತಿದ್ದುಪಡಿ ವಿಧೇಯಕವನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ತಮಗೆ ಗೊತ್ತಿರುವ ಹಾಗೆ 1983 ನೇ ಇಸವಿಯಲ್ಲಿ ಮೊದಲನೇ ಬಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಎಂದರೆ ಏನು ಮತ್ತು ಅದರ ಪ್ರಾಮುಖ್ಯತೆ ಏನು ಎಂಬುದನ್ನು ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು ಈ ರಾಜ್ಯಕ್ಕೆ ಮತ್ತು ಈ ದೇಶಕ್ಕೆ ತೋರಿಸಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಕರ್ನಾಟಕ ವಿಧಾನ ಸಭೆ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಮತ್ತು ಬಹು ಜನರ ಆಡಳಿತವನ್ನು ಜಾರಿ ಮಾಡಲಿಕ್ಕೆ, ಭಾರತ ಹಳ್ಳಿಗಾಡಿನ ನಾಡು, ಇದು ಬಲಿಷ್ಠವಾಗಬೇಕು, ಸಾಮಾಜಿಕ ಪರಿವರ್ತನೆಯಾಗಬೇಕು, ಭಾರತ ಬಲಿಷ್ಠವಾಗುವುದು